# ಉಪ್ಪಿಗಿಂತ ರುಚಿಯ ಗಣಿ!

# ವೇಲಿಜ್ಕಾ




**ಉಪ್ಪಿಗಿಂತ ರುಚಿಯಿಲ್ಲ ಎನ್ನುವುದು ನಮ್ಮ ಜನಪದದ ಮಾತು. ಆದರೆ ಉಪ್ಪಿನ ಗಣಿಯನ್ನು ನೋಡುವ ರುಚಿಯೇ ಬೇರೆ. ಪೋಲೆಂಡ್‌ನ ಕ್ರಾಕೊವ್ ನಗರಕ್ಕೆ ಭೇಟಿ ನೀಡುವವರು, ಅಲ್ಲಿನ ಪುರಾತನ ವೇಲಿಜ್ಕಾ ಉಪ್ಪಿನ ಗಣಿಗೆ ಭೇಟಿ ನೀಡದಿದ್ದರೆ ಉಪ್ಪಿಲ್ಲದ ಅಡುಗೆಯನ್ನು ಉಂಡ ಹಾಗೆಯೇ...**

■ ಡಾ. ಪ್ರೇಮಲತ ಬಿ.

ಪೂರ್ವ ಯೂರೋಪಿನ ಒಂದು ಪ್ರಮುಖ ದೇಶ ಪೋಲೆಂಡ್. ಈ ಪೋಲೆಂಡ್ ದೇಶದ ದಕ್ಷಿಣದಲ್ಲಿ ಕ್ರಾಕೊವ್ ಎನ್ನುವ ನಗರವಿದೆ. ಜೆಕ್ ರಿಪಬ್ಲಿಕ್ ದೇಶದ ಸೀಮಾರೇಖೆಗೆ ಹತ್ತಿರದಲ್ಲೇ ಇರುವ ಈ ನಗರ ಇತಿಹಾಸ, ಚರಿತ್ರೆ, ಕೈಗಾರಿಕೆ, ವಾಣಿಜ್ಯೋದ್ಯಮ ಎಲ್ಲಕ್ಕೂ ಪ್ರಸಿದ್ಧವಾದ್ದು.

ಕ್ರಾಕೊವ್ ನಗರ ಜರ್ಮನಿಯ ಹಿಟ್ಲರನ ಸರ್ವಾಧಿಕಾರದ ಹಲವು ಕಪ್ಪು ಅಧ್ಯಾಯಗಳು ಸೃಷ್ಟಿಯಾದ ಒಂದು ಮುಖ್ಯಸ್ಥಳವೂ ಹೌದು. ಮಿಲಿಯನ್‌ಗಟ್ಟಲೆ ಜನರನ್ನು ಬಂಧಿಸಿ, ಉಪವಾಸ ಕೆಡವಿ, ಗುಂಡಿಟ್ಟು, ವಿಷಕೊಟ್ಟು ಕೊಲ್ಲುತ್ತಿದ್ದ, ಜೀವಂತ ಮನುಷ್ಯರ ಮೇಲೆ ಅರಿವಳಿಕೆಯನ್ನೂ ನೀಡದೆ ಹಲವು ಪ್ರಯೋಗಗಳನ್ನು ಮಾಡುತ್ತ ನರಕಯಾತನೆಗೆ ಒಳಪಡಿಸುತ್ತಿದ್ದ ಕುಪ್ರಸಿದ್ಧ ಕಾನ್ಸನ್‌ಟ್ರೇಷನ್ ಕ್ಯಾಂಪುಗಳೂ ಇಲ್ಲಿವೆ.

ಹೀಗೆ ಸಿಹಿ, ಕಹಿ ನೆನಪುಗಳ ಹೊತ್ತ ನಗರದಲ್ಲಿ, ಪ್ರವಾಸದ ರುಚಿ ಹೆಚ್ಚಿಸಬಲ್ಲ ಪುರಾತನ ಉಪ್ಪಿನ ಗಣಿಯೊಂದು ಇದೆ. 13ನೇ ಶತಮಾನದವರೆಗಿನ ಇತಿಹಾಸ ಹೊಂದಿರುವ ವೇಲಿಜ್ಕಾ, ಅತಿ ಪುರಾತನ ಉಪ್ಪಿನ ಗಣಿಗಳಲ್ಲೊಂದು.

ಈ ಉಪ್ಪಿನ ಗಣಿ ಪತ್ತೆಯಾದದ್ದೇ ಒಂದು ರೋಚಕ ಕತೆ. ವೇಲಿಜ್ಕಾ ಎಂದು ಕರೆಯಲ್ಪಡುವ ಈ ಜಾಗದಲ್ಲಿ ಉಪ್ಪಿನ ಒರತೆಯೊಂದು ನಿಯೋಲಿಥಿಕ್ ಕಾಲದಿಂದಲೂ ಇತ್ತು. ಹನ್ನೆರಡು ಸಾವಿರ ವರ್ಷಗಳ ಹಿಂದೆ ನಿಯೋಲಿಥಿಕ್ ಕಾಲ ಶುರುವಾಯ್ತು. ಇದು ಶಿಲಾಯುಗದ ನಂತರ ಶುರುವಾದ ಕಾಲ. ‘ನಿಯೋ ’ ಎಂದರೆ ಹೊಸತು ’ಲಿಥಿಕ್ ’ ಎನ್ನುವುದು ಕಲ್ಲಾದ ಕಾರಣ ‘ಹೊಸ ಶಿಲಾಯುಗ’ ಎಂಬ ಅರ್ಥದ ಪದವಿದು.

ಈ ಒರತೆಯ ನೀರು ಅತ್ಯಂತ ಉಪ್ಪುಪ್ಪಾಗಿದ್ದು ಜನರಲ್ಲಿ ಅಪಾರ ಆಸಕ್ತಿಯನ್ನು ಕೆರಳಿಸಿತು. ಈ ಬುಗ್ಗೆಯ ನೀರನ್ನು ಶೋಧಿಸಿ ಉಪ್ಪನ್ನು ತಯಾರಿಸುವುದನ್ನು ಕಲಿತರು. ಉಪ್ಪಿಗಾಗಿ ಇಲ್ಲಿ ಗಣಿಗಾರಿಕೆ ಶುರುವಾದ್ದು 13 ನೇ ಶತಮಾನದಲ್ಲಿ. ‘ಉಪ್ಪು ಎಂದರೆ ಬಿಳಿ ಚಿನ್ನ’ ಎನ್ನುವಷ್ಟು ಉಪ್ಪಿಗೆ ಬೆಲೆಯಿದ್ದ ಕಾಲವದು. ಗೆಳೆತನವೇ ಜೀವನದ ಉಪ್ಪು (ಅತ್ಯಂತ ರುಚಿ) ಎನ್ನುವ ರೋಮನ್ನರ ಉಕ್ತಿ ಆ ಕಾಲದಲ್ಲಿ ಉಪ್ಪನ್ನು ಜನರು ಅದೆಷ್ಟು ಬಯಸುತ್ತಿದ್ದರು ಎಂಬುದನ್ನು ಸೂಚಿಸುತ್ತದೆ.

ಸತತವಾಗಿ ಹಲವು ನೂರು ವರ್ಷಗಳ ಕಾಲ